ಶ್ರೀ ಎನ್.ಜಿ.ನಾಯಕ್:- ಅದಕ್ಕೆ ಅವರು 5-6 ಜನರ ಒಂದು ಕಮಿಟಿ ಮಾಡಬೇಕೆಂದು ಹೇಳುತ್ತಿದ್ದಾರೆ. ಡಿಲೇ ಆಗುತ್ತದೆ. ಡಿಲೇ ಬಹಳ ಡೇಂಜರಸ್. ಅದಕ್ಕೆ ನಾನು ಹೇಳುವುದು ಏನೆಂದರೆ, ಈಗ ಪಾಸ್ ಮಾಡಿದರೆ ಒಳ್ಳೆಯದು. ಇದರಿಂದ ಎಷ್ಟೋ ಜನಗಳಿಗೆ ಅನುಕೂಲವಾಗುತ್ತದೆ. ತಾವು ಮಾಡಿರತಕ್ಕಂಥ ಸಲಹೆಗಳನ್ನು ನಾನು ನೋಡಿದ್ದೇನೆ, ನಾನು ಕೇಳಿದ್ದೇನೆ. ಯಾವ ಮಿನಿಸ್ಟರ್ ಇದುವರೆಗೂ ಮಾಡಿಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ:- ಸನ್ಮಾನ್ಯ ನಾಯಕರ ಪ್ರಸ್ತಾಪದ ಹಿಂದೆ ಇರತಕ್ಕಂಥ ಕಳಕಳಿಯನ್ನು ನಾವು ಅರ್ಥಮಾಡಿಕೊಳ್ಳಬೇಕು. ಅವರು ಏನು ಹೇಳಿದ್ದಾರೆ ಅದಕ್ಕೆ ನಾನು ಹೇಳಿದೆ. ನಾನು ಒಂದು ತಿಂಗಳು ಎಂದು ಏಕೆ ಹೇಳಿದೆ ಎಂದರೆ, ನಾಯಕರ ಸೂಚನೆಯನ್ನು ಅಂಗೀಕಾರ ಮಾಡಿ ಒಂದು ತಿಂಗಳು ಎಂದು ಹೇಳಿದೆ. ಅವರು ತಡವಾಗುತ್ತದೆ ಎಂದು ಹೇಳಿದ್ದಾರೆ. ಹೌದು, ಇದು ತಡವಾಗಬಹುದು ಅದಕ್ಕೆ ಒಂದು ತಿಂಗಳಲ್ಲಿ ವರದಿ ಕೊಡಬೇಕು ಎಂದು ಹೇಳಿದರೆ ಸನ್ಮಾನ್ಯ ನಾಯಕರ ಸೂಚನೆಯನ್ನೂ ಕೂಡ ಮಾಡಿದಂತೆ ಆಗುತ್ತದೆ. ಅವರಿಗೂ ಬೇಸರ ಇಲ್ಲ ನಿಮಗೂ ಬೇಸರ ಇಲ್ಲ. ಜಂಟಿ ಸಲಹಾ ಸಮಿತಿಗೆ, ತಮ ಕಡೆಯಿಂದ ಹೆಸರುಗಳು ಬಂದರೆ ನಾಳೆ ನಾವು ಸೂಚನೆಯನ್ನು ಕೊಡುತ್ತೇವೆ. ನಾಳೆ ನಾವು ಸೂಚನೆಯನ್ನು ಕೊಟ್ಟಾಗ ನಾಳೆ ಅಂಗೀಕಾರ ಮಾಡಬಹುದು.

ಛೇರ್ಮನ್:- ಈಗ ಕಂದಾಯ ಮಂತ್ರಿಗಳು ಇಲ್ಲ. ಇನಾಂ ರದ್ದಿಯಾತಿ ವಿಧೇಯಕ ತಿದ್ದುಪಡಿ ಮಂಡಿಸಬೇಕು.

## (iii) ಮೈಸೂರು ವೈಯಕ್ತಿಕ ಮತ್ತು ಸಂಕೀರ್ಣ ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕ 1992.

### (ಪರ್ಯಾಲೋಚನಾ ಪ್ರಸ್ತಾವ)

ಶ್ರೀ ಎಂ.ವೀರಪ್ಪ ಮೊಯಿಲಿ :(ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ಕಂದಾಯ ಸಚಿವರ ಪರವಾಗಿ 1992ರ ಮೈಸೂರು ವೈಯಕ್ತಿಕ ಮತ್ತು ಸಂಕೀರ್ಣ ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### (ಪ್ರಸ್ತಾವ ಮಂಡಿಸಲಾಯಿತು)

ಶ್ರೀ ಎಂ.ವೀರಪ್ಪ ಮೊಯಿಲಿ:- (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, The Mysore ( Personal and Miscellaneous) Inams Abolition Acts, 1954 ರಿಂದ ಜಾರಿಯಲ್ಲಿದೆ. ಅದಕ್ಕೆ ನಾವು ಈ ಒಂದು ತಿದ್ದುಪಡಿಯನ್ನು ಸೂಚನೆ ಮಾಡಿದ್ದೇವೆ. ಆರ್ಟಿಕಲ್ 31 (ಸಿ) ಪ್ರಕಾರ ಇದರ ಉದ್ದೇಶದ ಬಗ್ಗೆ ನಾವು ಸ್ಪಷ್ಟೀಕರಣ ಕೊಟ್ಟಿದ್ದೇವೆ. ಏನೆಂದರೆ ಈ ತಿದ್ದುಪಡಿಯನ್ನು ತರದೇ ಇದ್ದರೆ, ಸಾವಿರಾರು ಎಕರೆ ಫಲವತ್ತಾದ ಜಮೀನು ಹಾಗೂ ಅರಣ್ಯ ಸಂಪತ್ತು ಏನು ಇದೆ ಅದು ನಾಶವಾಗಿ ಹೋಗುತ್ತದೆ. ಅಂಥಾ ಅರಣ್ಯ ಸಂಪತ್ತನ್ನು ನಾವು ಇವತ್ತು ಕಾಯ್ದಿಡಬೇಕಾಗುತ್ತದೆ, ಉಳಿಸಿಕೊಳ್ಳಬೇಕಾಗುತದೆ. ಏಕೆಂದರೆ, ಇದರ ಬಗ್ಗೆ ಏನು ಒಂದು ಹಕ್ಕನ್ನು ರದ್ದುಗೊಳಿಸಲಿಕ್ಕೆ, ಏನು ಈ ತಿದ್ದುಪಡಿ ಮಾಡಿದ್ದೇವೆ, ಇದರ ಬಗ್ಗೆ ಸುಪ್ರೀಮ್ ಕೋರ್ಟಿನಲ್ಲಿ ಕೇಸ್ ಹೋಗಿ ಇಲ್ಲಿ ಬಂದಿತ್ತು.

ಶ್ರೀ ಸಿ.ಬೈರೇಗೌಡ:- ಅದು ಏನು ನಷ್ಟವಾಗುತ್ತಿದೆ ಎನ್ನುವ ವಿವರವನ್ನು ಹೇಳಬೇಕು. ಏಕೆಂದರೆ, ಆನಂದಪುರ ಅಥವಾ ಸಾಗರ ತಾಲ್ಲೂಕಿಗೆ ಸಂಬಂಧಪಟ್ಟಂತೆ ಇರತಕ್ಕಂಥಾದ್ದು. ಅದು ನಮಗೆ ದೂರ ಇರುವುದರಿಂದ ನಾವು ಒಪ್ಪಿಗೆ ಕೊಡುವಾಗ ಸರಿಯಾಗಿ ತಿಳಿದು ಒಪ್ಪಿಗೆ ಕೊಡತಕ್ಕಂಥಾದ್ದು ಸೂಕ್ತ. ನಮಗೆ ಅಷ್ಟು ಮಾಹಿತಿ ಇಲ್ಲ. ದಯವಿಟ್ಟು ಅದರ ಬಗ್ಗೆ ವಿವರವಾದ ಮಾಹಿತಿಯನ್ನು ಕೊಟ್ಟರೆ ಒಳ್ಳೆಯದು.

+ ಶ್ರೀ ಎಸ್.ಬಂಗಾರಪ್ಪ: (ಮುಖ್ಯಮಂತ್ರಿಗಳು):- ಮಾನ್ಯ ಸಭಾಧ್ಯಕ್ಷರೆ, ಇದು ಗೌತಮಪುರ ಎನ್ನತಕ್ಕಂಥ ಒಂದು ವಿಲೇಜ್. in Sagar Taluka. This matter comes under 1954 Personal & Miscellaneous Inams Abolition Act. This was given effect

to by the State Government in the year 1959. ಜಾರಿಗೆ ಕೊಟ್ಟರು, through a notification. ಇಂತಿಂಥಾ ಏರಿಯಾಗೆ ಜಾರಿಗೆ ಕೊಡಬೇಕೆಂದು ಮಾಡುತ್ತಾರೆ. ಅಲ್ಲಿ ಇನಾಂ ಅಬಾಲಿಷ್ ತಮಗೆ ಗೊತ್ತಿದೆ. ಇನಾಂದಾರ್ಸ್, ಎಕ್ಸ್ ಜೋಡಿದಾರ್ಸ್ ಎಲ್ಲಾ ಇದ್ದರು. ಅದನ್ನೆಲ್ಲಾ ಅಬಾಲಿಷ್ ಮಾಡಿದ್ದಾರೆ. ಒಳ್ಳೆಯ ಉದ್ದೇಶದಿಂದ ಮಾಡಿದ್ದಾರೆ.ಯ ಆ ರೀತಿ ಮಾಡತಕ್ಕಂಥ ಕಾಲದಲ್ಲಿ ಏನಾಗಿದೆ ಎಂದರೆ, ಮದ್ದಕ ಎನ್ನತಕ್ಕಂಥಾದ್ದು ಗ್ರೂಪ್ ಲೈಟ್ಸ್ ಇರತಕ್ಕಂಥಾದ್ದು, ಒಂದು ಇರುತ್ತದೆ. 20 ಜನ,30 ಜನ, 50 ಜನ ಅದು ಇಂಡಿವಿಜುಯಲ್ ರೈಟ್ ಅಲ್ಲ. Common right among the Inamdar's ಆ ರೈಟ್ ಇರುತ್ತದೆ. ಇಲ್ಲಿ ಏನು ಮಾಡಿದ್ದಾರೆಂದರೆ, ಅವರಿಗೆ ಇಡೀ ಗ್ರಾಮವನ್ನು ಆಗಿನ ಕಾಲದಲ್ಲಿ, ಮಹಾರಾಜರ ಕಾಲದಲ್ಲಿ ಜೋಡಿ ಗ್ರಾಮ, ಇನಾಂ ಗ್ರಾಮ ಎಂದು ಕೊಡುತ್ತಿದ್ದರು. ಈ ಕಾಮನ್ ರೈಟ್ ಇರತಕ್ಕಂಥಾ ಸಾವಿರ ಎಕರೆಯನ್ನು ಕೂಡ ಕೊಟ್ಟುಬಿಟ್ಟರು. ಆಗ ಯಾರೂ ಹೇಳುವರು ಇರಲಿಲ್ಲ. ಈ ಜನಸಂಖ್ಯೆಯೂ ಇರಲಿಲ್ಲ. ಆ ಗ್ರಾಮ ನೋಡಿರುವುದಿಲ್ಲ. ಬರೀ ಕಂದಾಯ ಒಂದು ಸಿಕ್ಕಿದರೆ ಸಾಕಾಗುತ್ತಿತ್ತು. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಆಗಿನ ಕಾಲದಲ್ಲಿ ಕಂದಾಯಕ್ಕಾಗಿಯೇ ಕೊಟ್ಟರತಕ್ಕಂಥಾದ್ದು ಏಕೆಂದರೆ, ಆ ಕಾಲದಲ್ಲಿ land revenue was the main source of income. ತಮಗೆ ಗೊತ್ತಿರುವ ಹಾಗೆ ಆ ಕಾಲದಲ್ಲಿ ಈಗಿರತಕ್ಕಂಥ ಕಮರ್ಷಿಯಲ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್ 28 ಇವೆಲ್ಲಾ ಇರಲಿಲ್ಲ. ಆಗ ಏನು ಮಾಡಿದ್ದಾರೆಂದರೆ, ಕೆಲವು ಜನ ಅವರ ರೈಟ್ಸ್‌ನ್ನು ಮಾರಾಟ ಮಾಡಿದರು. ಇನ್ನು ಕೆಲವು ಜನ ರೈಟ್ಸ್ ಮಾರಾಟ ಮಾಡಲಿಲ್ಲ. ಎಲ್ಲೆಲ್ಲೋ ಅವರೆಲ್ಲಾ ನೌಕರಿಗೆ ಹೊರಟು ಹೋಗಿಬಿಟ್ಟಿದ್ದರು. ಒಬ್ಬ ವ್ಯಕ್ತಿ ಏನು ಮಾಡಿದ್ದಾನೆಂದರೆ, ಅಲ್ಲಿರತಕ್ಕಂಥ ಸ್ಕ್ಯಾಂಡಿಂಗ್ ಟಿಂಬರ್ ಏನಿದೆ, ಹ್ಯೂಜ್ ಫಾರೆಸ್ಟ್, ನಮಗೂ ಕೂಡ ಗೊತ್ತಿರಲಿಲ್ಲ. ಗೊತ್ತಾದ ತಕ್ಷಣ ಅದನ್ನು ಪತ್ತೆ ಹಚ್ಚಿದೆವು. ಶ್ರೀ ವೀರೇಂದ್ರ ಪಾಟೀಲ್‌ಜೀಯವರ ಕಾಲದಲ್ಲಿ ನಾನು ಅಗ್ರಿಕಲ್ಚರ್ ಮಿನಿಸ್ಟರ್ ಆದ ಮೇಲೆ ಇದು ನಮಗೆ ಗೊತ್ತಾಯಿತು. ಅದಕ್ಕಿಂತ ಮುಂಚೆ ಗೊತ್ತಾಗಿತ್ತು, ಮಾನ್ಯ ಬಸವಲಿಂಗಪ್ಪನವರು ಅರಣ್ಯ ಮಂತ್ರಿಯಾವರಾಗಿದ್ದಾಗ ನಾನೇ ಖುದ್ದಾಗಿ ಅವರ ಮನೆಗೆ ಹೋಗಿ ಮಾತನಾಡಿಕೊಂಡು ಅವರಿಗೆ ಹೇಳಿ ಬಂದೆ. ಅಷ್ಟರೊಳಗೆ ಒಬ್ಬರು ಅಲ್ಲಿರತಕ್ಕ ಫಾರೆಸ್ಟ್ ಸ್ಕ್ಯಾಂಡಿಂಗ್ ಟಿಂಬರ್‌ನ್ನು ಎಲ್ಲಾ ಕಂಟ್ರಾಕ್ಟ್ ತೆಗೆದುಕೊಂಡು ಬಿಟ್ಟಿದ್ದಾನೆ. ಅವನು ಎಷ್ಟು ಸಾವಿರ ರೂಪಾಯಿಗಳಿಗೆ ತೆಗೆದುಕೊಂಡಿದ್ದಾನೆ. ಅದು ಎರಡೂವರೆ ಸಾವಿರ ಎಕರೆಯಷ್ಟು ಫಾರೆಸ್ಟ್. 1960-62ರ ಕಾಲದಲ್ಲಿ ಇರಬಹುದು ಎಂದು ಕಾಣುತ್ತದೆ. ಇದು 1954 ಆಕ್ಟ್, 1959ರಲ್ಲಿ ಜಾರಿಗೆ ಕೊಟ್ಟಿದ್ದಾರೆ. ಆದ್ದರಿಂದ 1960-61 ಎಂದು ಇಟ್ಟುಕೊಳ್ಳೋಣ. ಅದು ಬಹಳ ದಟ್ಟವಾದ ಕಾಡು, ಅದರ ಪಕ್ಕದಲ್ಲಿ ಒಂದು ಡ್ಯಾಮ್‌ನ್ನು ಕೂಡ ಕಟ್ಟಿದ್ದಾರೆ. ಇದು ಸಾಗರ ಮತ್ತು ಶಿಕಾರಿಪುರ ತಾಲ್ಲೂಕಿನ ಬಾರ್ಡರ್ ಹತ್ತಿರ ಬರುತ್ತದೆ. ಹೀಗೆ ಎರಡೂವರೆ ಸಾವಿರ ಎಕರೆ ಪ್ರದೇಶದಲ್ಲಿನ ಟಿಂಬರನ್ನು ಕೇವಲ 10 ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿಬಿಟ್ಟಿದ್ದಾರೆ. ಏಕೆಂದರೆ, ರೇಟ್ ಹೊರಟು ಹೋಗಿತ್ತು. ಹಿಂದಿನ ಡೇಟ್ ಹಾಕಿ ಅಗ್ರಿಮೆಂಟಿಗೆ ರುಜು ಹಾಕಿದರು, ಇದು ಅವರ ಮೇಲೆ ಇರುವ ಆರೋಪ. ಆಗ ಹತ್ತು ಸಾವಿರ ರೂಪಾಯಿಗಳು ಸಿಗುವುದು ಕಷ್ಟವಾಗಿತ್ತು. ಇನಾಂದಾರ್ ರೈಟ್ಸ್ ಅಬಾಲಿಶ್ ಆಗಿದ್ದಕ್ಕೆ ಆಕ್ಟ್ ಪ್ರಕಾರ ಪರಿಹಾರವನ್ನು ಕೊಡುತ್ತಾರೆ. ಹುಣಿಸೆ ಮರಗಳು ಇದ್ದರೂ ಕೊಡುತ್ತಾರೆ, ಬಾವಿ ಇದ್ದರೂ ಕೊಡುತ್ತಾರೆ, ಜಮೀನಿಗೂ ಕೊಡುತ್ತಾರೆ. ಅದು ನಮಗೆ ಗೊತ್ತಿದೆ. ಆ ಪರಿಹಾರವನ್ನು ಕೊಟ್ಟಿದ್ದು ಅಲ್ಲದೇನೆ, ಇವರ ಹಿಂದಿನ ಡೇಟ್‌ನ್ನು ಹಾಕಿ ಹತ್ತು ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿ ಆತನು ಟಿಂಬರ್ ತೆಗೆದುಕೊಂಡು ಹೋದ. ಪೂರ್ತಿಯಲ್ಲ, ಕೆಲವು ಭಾಗವನ್ನು ತೆಗೆದುಕೊಂಡು ಹೋದ. ಯಾರೂ ಇದನ್ನು ಗಮನಿಸಲಿಲ್ಲ, ಹಳ್ಳಿಯ ಜನರು ಮುಗ್ದರು ಸುಮ್ಮನೇ ಇದ್ದರು. ಇದರ ವಿಚಾರ ಗಮನಕ್ಕೆ ಬಂದಾಗ ಅಲ್ಲಿರತಕ್ಕಂಥ ಕೆಲವರು ಪಬ್ಲಿಕ್ ಲಿಟಿಗೇಶನ್‌ನ್ನು ಹೈಕೋರ್ಟ್‌ನಲ್ಲಿ ಹಾಕಿದರು. ಸ್ಟೇ ಕೊಟ್ಟರು, ಆ ಮೇಲೆ ಸ್ಟೇ ವೆಕೇಟ್ ಮಾಡಿದರು. ಇದರಲ್ಲಿ ನಮ್ಮ ಅರಣ್ಯ ಅಧಿಕಾರಿಗಳು

ಕೂಡ ಶಾಮೀಲು ಆಗಿರತಕ್ಕಂಥಾದ್ದು ನಮ್ಮ ಗಮನಕ್ಕೆ ಬಂದಿದೆ. ಸುಮಾರು 20-30 ವರ್ಷಗಳ ವರೆಗೂ ಈ ರೀತಿಯಾಗಿ ನಡೆಯುತ್ತಾ ಬಂತು ಅದು ಸುಮಾರು 50 ಕೋಟಿಗಳಿಗಿಂತಲೂ ಹೆಚ್ಚಿಗೆ ಆಗಬಹುದು, ಅದರ ಅಂದಾಜು ನನಗೆ ಸರಿಯಾಗಿ ಇಲ್ಲ. ಬೀಟೆ, ತೇಗ ಮತ್ತು ಇತರ ದೊಡ್ಡ ದೊಡ್ಡ ಟಿಂಬರ್ಸ್ ಇದ್ದುವು. ಬಹಳ ಸುಂದರವಾದ ಕಾಡು ಅದು. ಅದನ್ನು ಹತ್ತು ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿದ್ದರು. ಇದು ಬಹಳ ಹೊಟ್ಟೆಉರಿಯತಕ್ಕಂಥ ವಿಚಾರ. ನಾನು ಶಾಸಕನಾಗಿದ್ದಾಗ ಮಾನ್ಯ ಬಸವಲಿಂಗಪ್ಪನವರಿಗೆ ಹೇಳಿದೆ, ಆ ಮೇಲೆ ನಾನು ಸಚಿವನಾದ ಮೇಲೆ ಮಾನ್ಯ ವೀರೇಂದ್ರಪಾಟೀಲರಿಗೂ ಹೇಳಿದೆ, ಆಗ ಅವರು ಬಹಳ ಇಂಟ್ರೆಸ್ಟ್ ತೆಗೆದುಕೊಂಡು ವಿಚಾರ ಮಾಡಿದರು. ಮಾನ್ಯ ವೀರೇಂದ್ರ ಪಾಟೀಲರ ಮಂತ್ರಿ ಮಂಡಳದಲ್ಲಿ, ಸಚಿವ ಸಂಪುಟದ ಸಭೆಯಲ್ಲಿ ವಿಷಯವನ್ನು ನಾನೇ ರೈಸ್ ಮಾಡಿದ್ದೆ. ಅಡ್ವೋಕೇಟ್ ಜನರಲ್‌ರವರ ಮಟ್ಟಕ್ಕೆ ತೆಗೆದುಕೊಂಡು ಹೋಗಿ ಚರ್ಚೆ ಮಾಡಿ ಆದಮೇಲೆ, ಆಗಲೇ ಕೆಲವರು ಜಡ್ಜ್‌ಮೆಂಟ್ ಇತ್ಯಾದಿಗಳನ್ನು ಅವರ ಕಡೆಗೆ ಮಾಡಿಕೊಂಡಿದ್ದರು. ಸುಪ್ರೀಂ ಕೋರ್ಟ್‌ನವರೆಗೂ ವಿಷಯ ಹೋಗಿತ್ತು. ಅವರು ನಾಟಾಗಳನ್ನು ತೆಗೆದುಕೊಂಡು ಹೋಗುವ ರೀತಿಯಲ್ಲಿ ಮಾಡಿಕೊಂಡಿದ್ದರು. ಆಮೇಲೆ ನಾವು ಅಡ್ವೋಕೇಟ್ ಜನರಲ್‌ರವರ ಹತ್ತಿರ ಹೋಗಿ ವಿಚಾರ ಮಾಡಿದೆವು. ಅವರು ಈಗ ಜಡ್ಜ್ ಆಗಿದ್ದಾರೆ, ನಾವು ಅವರ ಉಪಕಾರವನ್ನು ಸ್ಮರಣೆ ಮಾಡಬೇಕಾಗುತ್ತದೆ. ಅವರು ಬೇರೆ ಲೀಗಲ್ ವಿಚಾರವನ್ನು ನಮಗೆ ಹುಡುಕಿಕೊಟ್ಟರು. ಅದಕ್ಕೆ ಅಮೆಂಡ್‌ಮೆಂಟ್ ತರಬೇಕು, ಅದನ್ನು ಮಾಡಿಕೊಂಡು ಬಿಟ್ಟರೆ ಆಗ ಅವರಿಗೆ ಏನೂ ಮುಟ್ಟುವುದಕ್ಕೆ ಆಗುವುದಿಲ್ಲ, ರಾಜ್ಯದ ಆಸ್ತಿಯನ್ನು ಉಳಿಸಿಕೊಳ್ಳಬಹುದು, ಆಗ ಮಾತ್ರ ಸಾಧ್ಯ ಎಂದು ಹೇಳಿದರು. ಅದಾದ ಮೇಲೆ ಅಮೆಂಡ್‌ಮೆಂಟ್ ಬಗ್ಗೆ ವಿಚಾರ ಮಾಡಿಸಿ, ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಎಕ್ಸಾಮಿನ್ ಮಾಡಿಸಿ, ಆ ಪ್ರಾಪರ್ಟಿ ಏನಿದೆ, ರೈಟ್ ಮೊದಲೇ ಹೊರಟು ಹೋಗಿದೆ, ಹೋದ ಮೇಲೆ ಮಾಡುವ ಹಾಗಿಲ್ಲ, ಹಿಂದಿನ ಡೇಟ್ ಹಾಕಿ ಮಾಡಲು ಆಗುವುದಿಲ್ಲ, ಇತ್ಯಾದಿ ವಿಚಾರಗಳು ಬಂದು, ಆ ಪ್ರಾಪರ್ಟಿಯನ್ನು ಉಳಿಸಬೇಕೆಂದು ಮಾಡಿದ್ದೇವೆ. ಇದು ಸಿಂಪಲ್ ಆಗಿರುವ ಅಮೆಂಡ್‌ಮೆಂಟ್. ಹೈಕೋರ್ಟ್‌ನಲ್ಲಿ ನಾಳೆ ಯಾರಾದರೂ ಹಾಕಿದರೂ ಕೂಡ ಹಾಕಿದವರಿಗೆ ಆಗಬಾರದು. ನಮ್ಮ ಸರಕಾರದ ಆಸ್ತಿ, ಅರಣ್ಯ ಇಲಾಖೆಯ ಆಸ್ತಿ. ಇದನ್ನು ಸಂಪೂರ್ಣವಾಗಿ ಉಳಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ಪ್ರಾಮಾಣಿಕ ಪ್ರಯತ್ನ ಮಾಡಿ ಈಗ ರೆಡಿ ಮಾಡಿ ತಮ್ಮ ಮುಂದೆ ತಂದಿದ್ದೇವೆ. ಇದನ್ನು ಬಿಟ್ಟರೆ ಬೇರೆ ಯಾವ ವಿಚಾರವೂ ಇರಲಿಲ್ಲ ಇಲ್ಲ. ಸರಕಾರದ ಆಸ್ತಿಯನ್ನು ಉಳಿಸತಕ್ಕಂಥ ವಿಚಾರ ಇಲ್ಲಿದೆ.

ಶ್ರೀ ಸಿ.ಬೈರೇಗೌಡ: (ವೇಮಗಲ್):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ವಿವರಣೆಯನ್ನು ಕೊಟ್ಟಿದ್ದನ್ನು ಕೇಳಿ ನಾನು ಅದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ಜೋಡಿ ಇನಾಂ ರದ್ದಿಯಾತಿ ಕಾನೂನು ಬರಬೇಕಾಗಿದ್ದರೆ, ನಮ್ಮ ಜಿಲ್ಲೆಯಲ್ಲಿಯೂ ಬಹಳ ತೀವ್ರವಾದಂಥ ಹೋರಾಟ ನಡೆಯಿತು. ಈ ಕಡೆ ಪೂರ್ವ ಭಾಗದಲ್ಲಿ ಜೋಡಿ ಇನಾಂ ರದ್ದಿಯಾಗಬೇಕೆಂದು ಹೋರಾಟ ನಡೆದರೆ ಆ ಕಡೆ ನಮ್ಮ ರಾಜ್ಯದ ಪಶ್ಚಿಮ ಭಾಗದಲ್ಲಿ ಭೂಮಿಗೋಸ್ಕರ ಕಾಗೋಡು ಹೋರಾಟ ನಡೆಯಿತು. ಈ ಎರಡೂ ಹೋರಾಟಗಳ ಉದ್ದೇಶ ಒಂದೇ ಆಗಿತ್ತು. ಈ ಹೋರಾಟದ ಪರಿಣಾಮವಾಗಿ ಅಂದರೆ ಕಾಗೋಡು ಹೋರಾಟದ ಮೂಲಕ ಗೇಣಿದಾರರಿಗೆ ರಕ್ಷಣೆಯನ್ನು ಕೊಡತಕ್ಕಂಥ ಮತ್ತು ಈಗಿನ ಭೂಸುಧಾರಣೆ ಮಸೂದೆ ಜಾರಿಗೆ ಬಂದಿರತಕ್ಕಂಥಾದ್ದು ಇದೆ. ಅದೇ ರೀತಿ ನಮ್ಮ ಕೋಲಾರ ಜಿಲ್ಲೆಯಲ್ಲಿ ನಡೆದ ಹೋರಾಟದಿಂದ ಈ ಇನಾಂ ರದ್ದಿಯಾತಿ ಕಾನೂನಿನ ಪದ್ಧತಿ ಏನಿತ್ತು ಅದನ್ನು ಹೋಗಲಾಡಿಸುವ ದೃಷ್ಟಿಯಿಂದ ಯಾವ ರೈತರು ನೂರಾರು ವರ್ಷಗಳಿಂದ ಭೂಮಿಯನ್ನು ಉಳುತ್ತಿದ್ದರು, ಅವರನ್ನು ಭೂಮಿಯ ಒಡೆಯರನ್ನಾಗಿ ಮಾಡುವ ಇನಾಂ ರದ್ದಿಯಾತಿ ಕಾನೂನು ಬಂತು. ನಾನು ಸೂಕ್ಷ್ಮವಾಗಿ ಎರಡು ಕಾನೂನುಗಳ ಹಿನ್ನೆಲೆಯನ್ನು ಕೊಡುತ್ತಿದ್ದೇನೆ. ಇದಕ್ಕಾಗಿ ಎರಡೂ ಕಡೆ ಸಾಕಷ್ಟು ಹೋರಾಟ ಕೂಡ ನಡೆದಿದೆ. ಪೂರ್ವದಲ್ಲಿ ಮತ್ತು ನಮ್ಮ ಹಳೇ ಮೈಸೂರು ರಾಜ್ಯದ ಪಶ್ಚಿಮದಲ್ಲೂ ಹೋರಾಟ ನಡೆದಿದೆ. ಈ ಕಾನೂನು ಮಾಡುವಾಗ ಅಪ್ಪಿತಪ್ಪಿ ಇಲ್ಲಿ ಇಲ್ಲಿ ಕಣ್ತಪ್ಪಿಸಿ ಬಿಟ್ಟು ಹೋಗಿರುವ ನಿದರ್ಶನ, ಮುಖ್ಯಮಂತ್ರಿಗಳು

ಈಗ ವಿವರಣೆ ಕೊಟ್ಟಮೇಲೆ ಇದು ಕಾನೂನಿನ ಕಣ್ಣನ್ನು ಅಧಿಕಾರಿಗಳಕ ಕಣ್ಣನ್ನು , ಸರ್ಕಾರದ ಕಣ್ಣನ್ನು ತಪ್ಪಿಸಿ ಈವರೆಗೆ ಕೂಡ ಇದೆಲ್ಲ ಉಳಿದುಕೊಂಡಿದೆ ಎಂದರೆ ಆಶ್ಚರ್ಯ. ನಿಜವಾಗಿಯೂ ಇದನ್ನು ಸ್ವಾಗತಿಸುವುದರ ಜೊತೆಗೆ ಇದನ್ನು ಮೆಚ್ಚಬೇಕಾದ್ದು ಕೂಡ ನನ್ನ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ. ಕಾರಣ, ಈ ಈ ರೀತಿ ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ದಕ್ಕಬೇಕಾಗಿರುವ ಆಸ್ತಿಯನ್ನು ಕಾನೂನಿನ ಜಟಿಲತೆಗಳನ್ನು ತೂರಿಕೊಂಡು ಹೋಗಿ, ಇಲ್ಲದೇ ಇರುವುದನ್ನು ಸೃಷ್ಟಿಮಾಡಿ ಕಾಗದಗಳನ್ನು, ಅಚ್ಚುಗಳನ್ನು ಸೃಷ್ಟಿಮಾಡಿ ಕಾನೂನಿನ ಸಂದಿಗಳಲ್ಲಿ ತೂರಿಕೊಂಡು ಹೋಗುವ ಪ್ರಯತ್ನ ನಡೆದಿದೆ. ಚಾಪೆ ಕೆಳಗಲ್ಲ ರಂಗೋಲೆ ಕೆಳಗೆ ತೂರಿಹೋಗುವ ಒಂದು ವ್ಯವಸ್ಥೆಯಿಂದ ಇದುವರೆಗೂ ಕಣ್ತಪ್ಪಿಹೋಗಿತ್ತೆಂಬುದನ್ನು ಇದನ್ನು ಮೇಲೆ ತರುವುದಕ್ಕೆ ಯಾರೇ ಕಾರಣ ಇರಲಿ, ಮುಖ್ಯಮಂತ್ರಿಗಳಾಧ ಬಂಗಾರಪ್ಪನವರೇ ಇದಕ್ಕೆ ಕಾರಣಕರ್ತರಾಗಿದ್ದರೂ ಅವರು ಅಭಿನಂದನೆಗೆ ಅರ್ಹರು ಎಂದು ಹೇಳಲು ಇಷ್ಟಪಡುತ್ತೇನೆ. ನನಗೆ ಆಶ್ಚರ್ಯ, 1952ರಿಂದ ಕಾನೂನಾಗಿ 59 ರಲ್ಲಿ ಜಾರಿಗೆ ಬಂದು ನಾವು 92 ರಲ್ಲಿದ್ದೇವೆ, ಇಲ್ಲಿಯವರೆಗೂ ಇದು ಕಣ್ತಪ್ಪಿಸಿ ಇತ್ತೆಂದರೆ ನಮಗೆ ಅನುಮಾನ ಬರುತ್ತದೆ. ಈ ಕಾನೂನಿನಲ್ಲಿ ಈ ತರಹದವು ಇನ್ನೂ ಎಷ್ಟು ಉಳಿದುಕೊಂಡಿದ್ದಾವೋ ಎಂಬ ಅನುಮಾನ ಬರುತ್ತಿದೆ. ಇನ್ನೂ ಏನಾದರೂ ಇಂತಹ ನ್ಯೂನತೆಗಳಿದ್ದರೆ ನುಸುಳಿಹೋಗುವ ವ್ಯವಸ್ಥೆ ಇದ್ದರೆ ಅದನ್ನು ಪತ್ತೆಹಚ್ಚಿ ಸರ್ಕಾರದ ಆಸ್ತಿಯನ್ನು, ಸಾರ್ವಜನಿಕ ಆಸ್ತಿಯನ್ನು ರಕ್ಷಣೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಮಾಡಿ ಈ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಅತಿಜಾಗ್ರತೆಯಾಗಿ ಇದು ಕಾನೂನಾಗಲಿ ಸರ್ಕಾರಕ್ಕೆ ಆದಾಯ ಬರುವುದು ಅನ್ನೂ ಹೆಚ್ಚಿಗೆ ಬರಲಿ ಎಂದು ಸೂಚಿಸಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ " 1992ರ ಮೈಸೂರು ವೈಯಕ್ತಿಕ ಹಾಗೂ ಸಂಕೀರ್ಣ ಇನಾಮ್ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು.**

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಛೇರ್ಮನ್:- "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ.

ಛೇರ್ಮನ್:- ಪ್ರಸ್ತಾವ ಏನೆಂದರೆ " ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ **ಹಾಗೂ** ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

ಶ್ರಿ ಎಸ್.ಬಂಗಾರಪ್ಪ: (ಮುಖ್ಯಮಂತ್ರಿಗಳು) " 1992 ಮೈಸೂರು ವೈಯಕ್ತಿಕ ಹಾಗೂ ಸಂಕೀರ್ಣ ಇನಾಮ್ ರದ್ದಿಯಾತಿ (ತಿದ್ದುಪಡಿ) ಅಂಗೀಕರಿಸಬೇಕೆಂದು ಕೋರುತ್ತೇನೆ."

ಛೇರ್ಮನ್:- ಪ್ರಸ್ತಾವ ಏನೆಂದರೆ :" 1992ರ ಮೈಸೂರು ವೈಯಕ್ತಿಕ ಹಾಗೂ ಸಂಕೀರ್ಣ ಇನಾಮ್ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

ಛೇರ್ಮನ್:- ಕೃಷ್ಣಾ ಜಲಾನಯನ ಪ್ರದೇಶ ಪ್ರಾಧಿಕಾರ ವಿಧೇಯಕ 1992 ಇದನ್ನು ನಾಳೆಗೆ ತೆಗೆದುಕೊಳ್ಳೋಣ.

ಶಾಸನಾತ್ಮಕ ನಿರ್ಣಯ

ಶ್ರೀ ಎಸ್.ಬಂಗಾರಪ್ಪ:- ಮಾನ್ಯಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಈ ಒಂದು ನಿರ್ಣಯವನ್ನು ಸದನದ ಅನುಮೋದನೆಗಾಗಿ ಮಂಡಿಸುತ್ತಿದ್ದೇನೆ.

" This House considers that there is necessity of establishment of the permanent Karnataka High Court Bench in North Karnataka Area and this House urges the Government of India to establish a permanent Court Bench immediately." ಈ ನಿರ್ಣಯವನ್ನು ಮಂಡನೆ ಮಾಡುವುದಕ್ಕಾದರೂ ಕಾರಣ ಒಂದೇ ಒಂದು ಇದೆ. ಈ ಕಡೆ ಮತ್ತು ಆ ಕಡೆ ಕುಳಿತಿರತಕ್ಕಂಥ ಮಾನ್ಯ ಸದಸ್ಯರುಗಳು ಪಕ್ಷಾತೀತವಾಗಿ ನಾವು ಒಂದು ಬೇಡಿಕೆಯನ್ನು ಪದೇ ಪದೇ ಇಡುತ್ತಿದ್ದೇವೆ. ಇವತ್ತು ಮಹಾರಾಷ್ಟ್ರದಲ್ಲಿ ಔರಂಗಾಬಾದ್‌ನಲ್ಲಿದೆ, ನಾಗಪುರದಲ್ಲಿದೆ. ಆಮೇಲೆ ಉತ್ತರ ಪ್ರದೇಶದಲ್ಲಿದೆ ಇನ್ನೂ ಬೇರೆ ಬೇರೆ ಕಡೆಗಳಲ್ಲಿ ಇವೆ. ಮೊನ್ನೆ ಮೊನ್ನೆ ತಾನೇ ಅಸ್ಸಾಂನಲ್ಲಿ ಮಾಡಿದ್ದಾರೆ. ಅಲ್ಲಿಕೂಡ ಇದೇ ರೀತಿಯ ಹೌಸ್ ರೆಸಲ್ಯೂಷನ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು, ಒತ್ತಡವನ್ನು ತಂದು ಮಾಡಿದ್ದಾರೆ. ಇಲ್ಲಿ ನಾವಾದರೂ ಕೂಡ ಇವತ್ತು ಕಕ್ಷಿದಾರರಿಗೆ ಅನುಕೂಲವಾಗಬೇಕು ಅವರು ಬೆಳಗಾಂ, ಬಿಜಾಪುರ, ಧಾರವಾಡ, ಬೀದರ್, ಗುಲ್ಬರ್ಗ, ಕಾರವಾರ, ರಾಯಚೂರು ಈ ಕಡೆಯಿಂದ ಬೆಂಗಳೂರಿಗೆ ಬರತಕ್ಕಂಥ ಅನೇಕ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಉತ್ತರ ಕರ್ನಾಟಕ ಭಾಗದಲ್ಲಿ ಹೈಕೋರ್ಟ್‌ನ ಸ್ಥಾಪನೆ ಮಾಡುವುದರಿಂದ ಜನಸಾಮಾನ್ಯರಿಗೆ ಅನೂಕೂಲವಾಗಲಿದೆ. ಇಲ್ಲಿ ಬಂದು ಉಳಿಯುವುದರಿಂದ ಅದರ ಖರ್ಚು ವೆಚ್ಚವೂ ಕೂಡಾ ಜಾಸ್ತಿಯಾಗುತ್ತದೆ. ಇದನ್ನು ತಡೆಹಿಡಿಯಬೇಕು ಎನ್ನತಕ್ಕಂಥ ದೃಷ್ಟಿಯಿಂದ ಇದನ್ನು ಮಾಡುವುದು ಸರ್ಕಾರದ ಆದ್ಯ ಕರ್ತವ್ಯ. ಇದು ಜನತೆಯ ಆಸೆಯಾಗಿದೆ. ಅದಕ್ಕೋಸ್ಕರ ಈ ಒಂದು ನಿರ್ಣಯದ ಮುಖಾಂತರ ಕೇಂದ್ರ ಸರ್ಕಾರಕ್ಕೆ ನಾವು ಒತ್ತಡವನ್ನು ತರಬೇಕೆನ್ನುತಕ್ಕಂಥ ವಿಚಾರವನ್ನು ನಾವು ಮಾಡಿದ್ದೇವೆ. ಇವತ್ತು ಬೆಳಿಗ್ಗೆ ಮೇಲ್ಮನೆಯಲ್ಲಿ ಈ ನಿರ್ಣಯವನ್ನು ಯಾವುದೇ ಒಂದು ಮರುಮಾತನಾಡದೆ ಚರ್ಚೆಯಿಲ್ಲದೆ ಪಾಸ್ ಮಾಡಿದ್ದಾರೆ. ವಿರೋಧಪಕ್ಷದ ನಾಯಕರು ನಾವು ಚರ್ಚೆ ಮಾಡುವುದಿಲ್ಲ. ನಮ್ಮೆಲ್ಲರ ಬೆಂಬಲ ಇದೆ ಎಂದು ಹೇಳಿದರು. ಎಲ್ಲಾ ಪಕ್ಷಗಳವರೂ ಅದೇ ರೀತಿ ಹೇಳಿದ್ದಾರೆ. ಹೀಗೆ ಆ ಮನೆಯಲ್ಲಿಯೂ ಕೂಡ ನಿರ್ಣಯ ಮಂಡನೆಯಾಗಿ ಸರ್ವಾನುಮತದಿಂದ ಪಾಸಾಗಿದೆ. ಅದೇ ರೀತಿಯಾಗಿ ಅಲ್ಲಿಯೂ ಕೂಡ ತಮ್ಮ ಮುಖಾಂತರ ನಾನು ವಿನಂತಿ ಮಾಡುತ್ತಿದ್ದೇನೆ, ಇದನ್ನು ಸರ್ವಾನುಮತದಿಂದ ಪಾಸುಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕು. ಅದಕ್ಕೆ ತಾವು ಬೆಂಬಲವನ್ನು ಕೊಡಬೇಕೆನ್ನುವ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇವೆ.

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಹೆಚ್.ಬನ್ನಿಕೋಡ್: ( ಹಿರೇಕೆರೂರ್):- ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕಂಥ ಈ ಒಂದು ನಿರ್ಣಯದ ಬಗ್ಗೆ ಬಹುತೇಕ ಸದನದಲ್ಲಿ ಭಿನ್ನಾಭಿಪ್ರಾಯ ಇಲ್ಲ. ಬಹಳ ದಿನಗಳಿಂದ ಉತ್ತರ ಕರ್ನಾಟಕದಲ್ಲಿ ಶ್ರೇಷ್ಠ ನ್ಯಾಯಾಲಯದ ಪೀಠ ಸ್ಥಾಪನೆಯಾಗಬೇಕೆಂಬ, ಒತ್ತಾಯ ಇತ್ತು. ಈ ದಿವಸ ಸರ್ಕಾರ ಈ ಒಂದು ನಿರ್ಣಯವನ್ನು ಮಂಡಿಸಿ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್‌ನ ಪೀಠವನ್ನು ಸ್ಥಾಪಿಸುವುದಕ್ಕೆ ತಂದಿರತಕ್ಕಂಥ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಆ ಭಾಗದ ಧಾರವಾಡ, ಬಿಜಾಪುರ, ಬೆಳಗಾಂ, ರಾಯಚೂರು, ಗುಲ್ಬರ್ಗ, ಕಾರವಾರ್, ಈ ಜಿಲ್ಲೆಗಳ ಜನರಿಗೆ ಬೆಂಗಳೂರು ಅತೀ ದೂರವಾದುದು. ಕಕ್ಷಿದಾರರಿಗೆ, ಲಿಟಿಗೆಂಟ್ ಪಬ್ಲಿಕ್ ಇಲ್ಲಿ ಬೆಂಗಳೂರಿಗೆ